ಅಧ್ಯಕ್ಷರು:– ನಿಮ್ಮ ಸಮಿತಿಗೆ ಕಳುಹಿಸಿಕೊಡುತ್ತೇನೆ ಆ ಸ್ಟೇಟ್‌ಮೆಂಟ್‌ನ್ನು. You will have the final word. ಅಂತಿಮ ಮಾತು ನಿಮ್ಮದೇ ಆಗುತ್ತದೆ.

11-45 ಎ.ಎಂ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ದೇವನಹಳ್ಳಿ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನಲ್ಲಿ ಆಡೆತಡೆಯಾಗಿ ರೈತರ ಚಳುವಳಿ

† ಡಾ।। ಜೀವರಾಜ ಆಳ್ವ:– ಮಾನ್ಯ ಅಧ್ಯಕ್ಷರೇ, ದೇವನಹಳ್ಳಿಯಲ್ಲಿ ಮೊನ್ನೆ 13ನೇ ತಾರೀಖು ಕೆ.ಇ.ಬಿ.ಯ ಕಛೇರಿ ಮುಂದೆ ಒಂದು ಘಟನೆ ನಡೆದಿದೆ. ಬಹಳ ಮುಖ್ಯವಾದ ವಿಚಾರ. ಅವತ್ತು ರೈತರು ಒಂದು ಅಜಿಟೇಷನ್.....

ಶ್ರೀ ಆರ್.ವಿ. ದೇಶಪಾಂಡೆ:– ನಾವು ಒಪ್ಪಿಕೊಳ್ಳುತ್ತೇವೆ ಸಾರ್, ನಾವು ಸದನ ಶುರುವಾಗುವುದಕ್ಕೆ ಮುಂಚೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ಪಾರ್ಟಿ ಮೀಟಿಂಗ್ ಇದ್ದುದರಿಂದ ಸ್ವಲ್ಪ ಲೇಟ್ ಆಯಿತು. ಈ ದೇವನಹಳ್ಳಿಯಲ್ಲಿ ಪವರ್ ಸಪ್ಲೈ ಬಹಳ ಇರಾಟಿಕ್ ಆಗಿದ್ದು ರೈತರಿಗೆ ಬಹಳ ಕಷ್ಟವಾಗುತ್ತಿದೆ, ಬಹಳ ತೊಂದರೆಯಾಗುತ್ತಿದೆ. ಆ ದೃಷ್ಟಿಯಿಂದ ರೈತರು ಅಲ್ಲಿ ಒಂದು ಅಜಿಟೇಷನ್ ಮಾಡುತ್ತೇವೆ ಅಂತ ಸರ್ಕಾರಕ್ಕೆ ನೋಟೀಸ್ ಕೊಟ್ಟಿದ್ದಾರೆ. ಈ ವಿಚಾರ ಕೆ.ಇ.ಬಿ.ಗೂ ತಿಳಿಸಿದ್ದಾರೆ. ಅವತ್ತಿನ ದಿವಸ ಕೆಲವು ಇನ್ಸ್‌ಡೆಂಟ್ಸ್ ಆಗಿವೆ. ಕೆ.ಇ.ಬಿ.ಯ ಜೀಪನ್ನು ಸುಟ್ಟಿದ್ದಾರೆ. ಕಾಯಿದೆ ಬದ್ಧವಾಗಿ ಯಾರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೊ ಅದನ್ನು ತೆಗೆದುಕೊಳ್ಳಲೇಬೇಕು. ಇದರಲ್ಲಿ ಸಂಶಯ ಇಲ್ಲ. ಆದರೆ ಆ್ಯಂಟಿ ಸೋಷಿಯಲ್ ಎಲಿಮೆಂಟ್ಸ್ ಯಾರು ಮಾಡಿದ್ದಾರೆ ಅವರನ್ನು ಬಿಟ್ಟು ಇವತ್ತು ಮುಗ್ಧ ರೈತರು ಶಾಂತಿಯುತವಾಗಿ ಯಾರು ಅಜಿಟೇಷನ್ ಮಾಡುತ್ತಿದ್ದರು ಅವರನ್ನು ಅರೆಸ್ಟ್ ಮಾಡುತ್ತಿದ್ದಾರೆ. ಅದರಲ್ಲಿ ಕಾಂಗ್ರೆಸ್ ಪಕ್ಷದ ಕೆಲವು ಮುಖಂಡರನ್ನು, ವಿರೋಧ ಪಕ್ಷದ ಮುಖಂಡರನ್ನೂ ಸೇರಿಸಿ ಮೊನ್ನೆ 20 ಜನರನ್ನು ಅರೆಸ್ಟ್ ಮಾಡಿದ್ದಾರೆ. ನಿನ್ನೆ 17 ಜನರನ್ನು ಅರೆಸ್ಟ್ ಮಾಡಿದ್ದಾರೆ. ಮುಗ್ಧ ರೈತರ ಮೇಲೆ ದೌರ್ಜನ್ಯ ಅತ್ಯಾಚಾರ ಏನು ನಡೆದಿದೆ, ಅದು ಸರಿಯಲ್ಲ ಅರೆಸ್ಟ್ ಮಾಡಿರತಕ್ಕದ್ದು ಸರಿಯಾದ ಕ್ರಮ ಅಲ್ಲ. ಯಾರು ಇದರಲ್ಲಿ ಆಂಟಿ ಸೋಷಿಯಲ್ ಎಲಿಮೆಂಟ್ಸ್ ಕಾಯಿದೆಯನ್ನು ಕೈಯಲ್ಲಿ ತೆಗೆದುಕೊಂಡು ಗಲಾಟೆ ಮಾಡಿದರೋ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಿ, ಆದರೆ ಈ ಪ್ರಕಾರ ಮುಗ್ಧ ರೈತರಿಗೆ, ವಿರೋಧ ಪಕ್ಷದ ಮುಖಂಡರಿಗೆ ಉದ್ದೇಶ ಪೂರ್ವಕವಾಗಿ ತಾವು ಕ್ರಮ ತೆಗೆದುಕೊಂಡರೆ ನಾವು ಅದನ್ನು ಖಂಡಿಸಬೇಕಾಗುತ್ತದೆ. ಇದನ್ನು ಸರ್ಕಾರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್):– ಅಧ್ಯಕ್ಷರೇ ಈ ವಿಚಾರದಲ್ಲಿ ಗಮನ ಸೆಳೆಯುವ ಸೂಚನೆಗಳನ್ನು ಕಳುಹಿಸಿದ್ದೇನೆ. ಸತತವಾಗಿ ಕಳೆದ 3 ದಿವಸಗಳಿಂದ ತಮ್ಮ ಗಮನಕ್ಕೂ ಕೂಡ ತಂದಿದ್ದೇನೆ. ಅದಕ್ಕೆ ಸರ್ಕಾರದಿಂದ ಇದುವರೆವಿಗೂ ಯಾವ ರೀತಿಯ ಉತ್ತರ ಕೂಡ ಬಂದಿಲ್ಲ. ತಾವು ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಇರುವಾಗ ಇದನ್ನು ಪ್ರಸ್ತಾಪ ಮಾಡಿ ಎಂದು ಹೇಳಿದಿರಿ. ಮಾನ್ಯ ಮುಖ್ಯಮಂತ್ರಿಗಳು ಇವತ್ತು ಬರುತ್ತಾರೋ ಇಲ್ಲವೋ ಗೊತ್ತಿಲ್ಲ. ದೇವನಹಳ್ಳಿಯ ವಿಚಾರದಲ್ಲಿ ಹೇಳುವುದಾದರೆ ಮಾನ್ಯ ದೇಶಪಾಂಡೆಯವರು ಒಂದು ಪದವನ್ನು ಉಪಯೋಗಿಸಿದ್ದಾರೆ. ಅದಕ್ಕೆ ನನ್ನ ಒಂದು ಆಕ್ಷೇಪಣೆ ಇದೆ. ಅಲ್ಲಿ ಹೋಗಿದ್ದಂತವರು ಆಂಟಿ ಸೋಷಿಯಲ್ ಎಲಿಮೆಂಟ್ಸ್ ಎಂದು ಹೇಳಿದ್ದಾರೆ. ಅಲ್ಲಿ ಆ್ಯಂಟಿ ಸೋಷಿಯಲ್ ಎಲಿಮೆಂಟ್ಸ್ ಯಾರೂ ಹೋಗಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:– ಅಲ್ಲಿ ಇನ್ನೊಸೆಂಟ್ ರೈತರು ಇದ್ದರು. ಅವರು ಅಂಥ ಕೆಲಸ ಮಾಡಿಲ್ಲ. ಆಂಟಿ ಸೋಷಿಯಲ್ ಎಲಿಮೆಂಟ್ಸ್ ಏನಾದರೂ ಮಾಡಿದ್ದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದೇನೆ.

ಶ್ರೀ ಸಿ. ಬೈರೇಗೌಡ:– ಅಲ್ಲಿ ಹೋಗಿದ್ದವರು 100ಕ್ಕೆ 100 ಭಾಗ ರೈತರೇ ವಿನಃ ಯಾರೂ ಆ್ಯಂಟಿ ಸೋಷಿಯಲ್ ಎಲಿಮೆಂಟ್ಸ್ ಅಲ್ಲ. ಬೆಳೆ ಒಣಗುತ್ತಿದ್ದರೆ ರೈತನ ಹೊಟ್ಟೆಯಲ್ಲಿ ಬೆಂಕಿ ಬೀಳುತ್ತದೆ. ಜೀಪಿಗೆ ಬೆಂಕಿ ಇಡುವುದಿಲ್ಲ. ಈ ಇಡೀ ವ್ಯವಸ್ಥೆಗೆ ಬೆಂಕಿ ಇಡಬೇಕಾಗುತ್ತದೆ. ಸತತವಾಗಿ ನಾನು ಈ ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಆದರೆ ಅದನ್ನು ಸರಿಪಡಿಸತಕ್ಕಂಥ ಕೆಲಸ ಆಗಿಲ್ಲ. ಇವತ್ತು ಒಂದು ಜೀಪು ಸುಟ್ಟು ಹೋಗಿದ್ದರೆ ಕೋಟ್ಯಾಂತರ ರೂಪಾಯಿಗಳ ನಷ್ಟ ಏನೂ ಆಗಿಲ್ಲ. ರೈತರಿಗೆ ನೂರಾರು ಕೋಟಿ ರೂಪಾಯಿ ನಷ್ಟ ವಾಗುತ್ತಿದೆ. ಇವತ್ತಿನ ದಿವಸ ಇದರ ಬಗ್ಗೆ ಗಮನ ಇಲ್ಲ. ಒಂದು ಜೀಪು ಸುಟ್ಟು ಹೋಗಿದೆ ಎಂದು ಹೇಳಿ ರೈತರನ್ನು ತೆಗೆದುಕೊಂಡು ಹೋಗಿ ಒಳಗಡೆ ಹಾಕುತ್ತಿದ್ದಾರೆ, ನಾವು ಏನು ಅರ್ಥ ಮಾಡಿಕೊಳ್ಳಬೇಕು. ಜೀಪು ಹೋಗಿರಬಹುದು ಬಾಗಿಲು ಒಡೆದಿರಬಹುದು ಕಿಟಕಿ ಒಡೆದಿರಬಹುದು, ಅದನ್ನು ನಾನು ನಷ್ಟ ಅಂತ ಹೇಳುವುದಿಲ್ಲ. ಕೋಟಿ ಕೋಟಿ ರೂಪಾಯಿ ಬೆಳೆ ಇವತ್ತಿನ ದಿವಸ ಒಣಗಿ ಹೋಗುತ್ತಿದೆ, ರೈತರ ಗತಿ ಏನಾಗಬೇಕು. ಬೆಂಗಳೂರು ಗ್ರಾಮಾಂತರ, ಕೋಲಾರ ಜಿಲ್ಲೆ, ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ಈ ಭೂಮಿಯಲ್ಲಿರತಕ್ಕಂಥ ನೀರನ್ನು ಬಿಟ್ಟರೆ ಬೇರೆ ನೀರಿನ ಅನುಕೂಲ ಇಲ್ಲ. ದಿನಗಟ್ಟಲೆ ವಿದ್ಯುಚ್ಛಕ್ತಿ ಇರುವುದಿಲ್ಲ ಅಂದರೆ ರೈತನ ಗತಿ ಏನಾಗಬೇಕು. ಸಿಟ್ಟಿಗೆದ್ದ ರೈತರು ಹೋಗಿ ತಮ್ಮ ಸಿಟ್ಟನ್ನು ಅಲ್ಲಿ ಪ್ರದರ್ಶನ ಮಾಡಿದ್ದಾರೆ. ಅವರನ್ನು ತೆಗೆದುಕೊಂಡು ಹೋಗಿ ಒಳಗೆ ಹಾಕಿದ್ದಾರೆ. ಅವರು ಪಟ್ಟಿ ಕೊಡುತ್ತಾರೆ. ಇವರು ಪಟ್ಟಿ ಕೊಡುತ್ತಾರೆ ಅಂದರೆ ಆ ಪಟ್ಟಿ ಪ್ರಕಾರ ಇವರು ವ್ಯವಸ್ಥೆ ನಡೆಸುತ್ತಾರೆ ಅಂದರೆ ಏನು ಅರ್ಥ? ರೈತರು ಎಂದರೆ ಆ್ಯಂಟಿ ಸೋಷಿಯಲ್ ಎಲಿಮೆಂಟ್ಸ್ ಏನು? ಗೂಂಡಾಗಳು ಆಗುತ್ತಾರೆಯೇ? ಗೂಂಡಾಗಳು ಬೀದಿಯಲ್ಲಿ ಓಡಾಡುತ್ತಿದ್ದಾರೆ.. ಬೆಂಗಳೂರಿನ ಮಹಾತ್ಮಾ ಗಾಂಧಿ ರಸ್ತೆಯಲ್ಲಿ ಉದ್ದುದ ಕತ್ತಿಗಳನ್ನು ಹಿಡಿದುಕೊಂಡು ಓಡಾಡುತ್ತಿರುತ್ತಾರೆ. ಅವರನ್ನು ಹಿಡಿಯುವುದಕ್ಕೆ ಈ ಸರ್ಕಾರದ ಕೈಯಲ್ಲಿ ಆಗುತ್ತಾ ಇಲ್ಲ. ರೈತರು ಹೋಗಿ ಅವರ ಕಷ್ಟವನ್ನು ಹೇಳಿಕೊಂಡರೆ ಅವರಿಗೆ ಆಗಿರುವ ಅನ್ಯಾಯವನ್ನು ಇವರು ಹೇಳಿದರೆ ಅವರನ್ನು ಒಳಗೆ ಹಾಕುತ್ತಾರೆ. ಇವರು ಏನು ಮಾಡಿದರು, ಅದು ನಡೆಯುವುದಿಲ್ಲ ಎನ್ನುವ ಮಾತನ್ನು ನಾನು ನೊಂದು, ಬಹಳ ಸಿಟ್ಟಿನಿಂದ ಹೇಳುತ್ತಿದ್ದೇನೆ. ಒಂದು ಸಾರಿ ಆದರೆ ಹೇಳಬಹುದು ಇದು ಅನೇಕ ವರ್ಷಗಳಿಂದ ಆಗುತ್ತಿದೆ. ರೈತರು ಬದುಕಬೇಕೋ ಬೇಡವೋ? ನಮಗೂ ಹೊಟ್ಟೇ ಬಟ್ಟೆ ಬೇಡವೆ, ನಮಗೂ ಮಕ್ಕಳು ಮರಿ ಇದ್ದಾರೆ. ನಾವು ಬೇರೆಯವರ ತರಹ ಬದುಕಬೇಕಾಗಿದೆ. ದುರ್ವ್ಯವಸ್ಥೆಯನ್ನು ಸರ್ಕಾರ ನಿಲ್ಲಿಸಬೇಕು. ಅದು ಯಾವುದೇ ಸರಕಾರ ಇರಲಿ, ನಮ್ಮ ಸರ್ಕಾರ ಇದ್ದಾಗಲೂ ಕೂಡ ಇದೇ ಪರಿಸ್ಥಿತಿ ಇತ್ತು. ಆಗಲೂ ನಾವು ಹೇಳಿದ್ದೇವೆ. ಅಧಿಕಾರಕ್ಕೆ ಬಂದಂಥ ಸರ್ಕಾರಗಳು ಸತತವಾಗಿ ಆ ಭಾಗದ ರೈತರ ಸಮಾಧಿ ಮಾಡುತ್ತವೆ. ನಾನು ಇದನ್ನು ಬಲವಾಗಿ ಖಂಡಿಸುತ್ತೇನೆ. ಇವತ್ತು ಅಲ್ಲಿ ಯಾವ್ಯಾವ ರೈತರನ್ನು ಬಂಧನಕ್ಕೆ ಒಳಪಡಿಸಿದ್ದಾರೆ ಅಥವಾ ಪೊಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿದ್ದಾರೆ, ಈ ನಿಮಿಷದಲ್ಲೇ ಅವರನ್ನು ಬಿಡುಗಡೆ ಮಾಡಬೇಕು. ಅವರು ಆ್ಯಂಟಿ ಸೋಷಿಯಲ್ ಎಲಿಮೆಂಟ್ಸ್ ಅಲ್ಲ. ಅವರಿಗೆ ಇರತಕ್ಕಂಥ ಕಷ್ಟ ನೋವನ್ನು ಅಲ್ಲಿ ಕೇಳಿಕೊಳ್ಳುವುದಕ್ಕೆ ಹೋಗಿದ್ದಾರೆ. ಅವರು ಸಿಟ್ಟಿನಲ್ಲಿ ಪ್ರದರ್ಶನ ಮಾಡಿರಬಹುದು, ಜೀಪನ್ನು ಸುಟ್ಟಿರಬಹುದು. ಅದು ಅಪರಾಧ ಆಗುವುದಿಲ್ಲ. ಅದು ಅನ್ಯಾಯ ಆಗುವುದಿಲ್ಲ. ರೈತರು ಅನ್ಯಾಯ ಮಾಡಿಲ್ಲ ಎನ್ನತಕ್ಕಂಥಾದ್ದನ್ನು ನಾನು ಬಹಳ ಕಠಿಣವಾದಂತಹ ಪದಗಳನ್ನು ಉಪಯೋಗಿಸಿ ಹೇಳಬೇಕಾಗಿದೆ. ನಮ್ಮ ಅಧ್ಯಕ್ಷರ ಮುಖಾಂತರ ಮತ್ತೊಮ್ಮೆ ವಿನಂತಿ ಮಾಡುತ್ತೇನೆ. ಅವರನ್ನು ತತ್‌ಕ್ಷಣದಿಂದಲೇ ಬಿಡುಗಡೆ ಮಾಡುವುದಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕು.

ಡಾ|| ಜೀವರಾಜ ಆಳ್ವ:– ಅಧ್ಯಕ್ಷರೆ, ದೇವನಹಳ್ಳಿ ಭಾಗದಲ್ಲಿ ಒಂದು ತೋಟ ಇದೆ. ಇದರ ನೋವನ್ನು ನಾವು ಅನುಭವಿಸುತ್ತಾ ಇದ್ದೇವೆ. ಅದು ಒಂದು ಕಡೆ ಮೋಸ್ಟ್ ಎರಾಟಿಕ್ ಪವರ್ ಸಪ್ಲೈ ಎಂದು ಒಂದು ಕಾಲದವರೆಗೆ, ಈಗ ಇಲ್ಲವೇ ಇಲ್ಲ. ಪಂಪ್‌ಗಳೇನಾದರೂ ಹಾಕಿದರೆ

ಸುಟ್ಟು ಹೋಗುತ್ತವೆ. ನೀರೂ ಇಲ್ಲ. ಬೆಳೆಗಳು ಹಾಳಾಗಿದೆ. ರೈತರ ನೋವು ಹೇಳತೀರದು. ಆ ಬಡತನದಿಂದ ಎಂತಹ ನಿಕೃಷ್ಟ ಪರಿಸ್ಥಿತಿಗೆ ರೈತರು ಹೋಗಿದ್ದಾರೆ ಅಂದರೆ ಆ ಕೋಪದಲ್ಲಿ ಈ ಒಂದು ಚಳುವಳಿ ಏರ್ಪಾಡು ಮಾಡಿದರು. ವಿಪರ್ಯಾಸ ಏನು ಎಂದು ಹೇಳಿದರೆ ನನ್ನ ಮಿತ್ರರಾದ ಶ್ರೀ ದೇಶಪಾಂಡೆಯವರು, ಶ್ರೀ ಬೈರೇಗೌಡರು ಹೇಳಿದ ರೀತಿಯಲ್ಲಿ ಈ ರೈತರ ಚಳುವಳಿಯ ನಾಯಕತ್ವ ವಹಿಸಿದವರು ಕಾಂಗ್ರೆಸ್ ನಾಯಕರು. ಈ ಸ್ಥಳೀಯ ನಾಯಕರು ನಾಯಕತ್ವ ವಹಿಸಿ ದೊಡ್ಡ ಚಳುವಳಿ ಆಯಿತು. ಅಲ್ಲಿ ಕೆ.ಇ.ಬಿ. ಬಾಗಿಲು ಹಾಕಿದರು. ಜೀಪು ಸುಟ್ಟು ಆಯಿತು. ಆದರೆ ಇವತ್ತು ಏನು ನಡೆಯುತ್ತಾ ಇದೆ ಅಂದರೆ ಕೈಕೋಳ ಹಾಕಿಸಿ, ಬರೀ ಜನತಾದಳದ ಕಾರ್ಯಕರ್ತರನ್ನು ಪಿ.ಎಲ್.ಡಿ. ಬ್ಯಾಂಕ್ ಅಧ್ಯಕ್ಷರನ್ನು, ಇನ್ನೋಸೆಂಟ್ ರೈತರನ್ನು ಇದಕ್ಕೆ ಸಂಬಂಧ ಇಲ್ಲದವರಿಗೆ ತೊಂದರೆ ಕೊಟ್ಟಿದ್ದಾರೆ. ಏಕೆಂದರೆ ಅವರು ಚರ್ಚೆಗೆ ಹೋಗಿದ್ದಾರೆ. ಮಂತ್ರಿಮಂಡಲದ ಸದಸ್ಯರು ಇದಕ್ಕೆ ಗಮನ ಕೊಡಬೇಕಾಗುತ್ತದೆ. ಇಷ್ಟರವರೆಗೆ ಹೇಳಿ ಕಳುಹಿಸಿ ರಾಜಕೀಯ ದ್ವೇಷ ತೀರಿಸುವುದಕ್ಕೋಸ್ಕರ ಅರೆಸ್ಟ್ ಮಾಡುತ್ತಿದ್ದಾರೆ. ಅದರಿಂದ ಇದರ ಬಗ್ಗೆ ಪೂರ್ಣ ತೀರ್ಮಾನ ತನಿಖೆ ಆಗಬೇಕಾಗುತ್ತದೆ. ಬೈರೇಗೌಡರು ಹೇಳಿದ ರೀತಿಯಲ್ಲಿ ಯಾರು ಯಾರನ್ನು ಅರೆಸ್ಟ್ ಮಾಡಿದ್ದೀರೋ ಅವರಿಗೆ ಬಿಡುಗಡೆ ಮಾಡಬೇಕಾಗುತ್ತದೆ. ನಿಮಗೆ ಇಲ್ಲಿ ಪುಂಡರು ಪೋಕರಿಗಳನ್ನು ಅರೆಸ್ಟ್ ಮಾಡುವಷ್ಟು ಧೈರ್ಯ ಇಲ್ಲ. ಬೆಂಗಳೂರಿನಲ್ಲಿ ಅವರು ರಾಜಾರೋಷವಾಗಿ ತಿರುಗಾಡುತ್ತಿದ್ದಾರೆ. ಏನೋ ಒಂದು ರೋಷದಿಂದ ಕೆಚ್ಚಿನಿಂದ ಬಂದು ಈ ಕೆಲಸ ಏನೋ ಆಯಿತು, ಅನಾಹುತ ನಡೆದುಹೋಯಿತು. ಆದೂ ನಿಮ್ಮ ತಪ್ಪಿನಿಂದ. ಇಷ್ಟರವರೆಗೆ ಈ ಬಗ್ಗೆ ನಾನು ಯಾವತ್ತೂ ಮಾತನಾಡಿಲ್ಲ. ಪ್ರತಿ ಸದನದಲ್ಲಿಯೂ ವಿರೋಧ ಪಕ್ಷದ ನಾಯಕರಾದ ಚಂದ್ರೇಗೌಡರು, ಬೈರೇಗೌಡರು, ಸಿಂಧ್ಯಾರವರು, ಏಕಾಂತಯ್ಯನವರು ಇದರ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ಪ್ರತಿಸಲ ಸರ್ಕಾರದಿಂದ ನಾವು ಸರಿಪಡಿಸುತ್ತೇವೆ ಎನ್ನುವ ಆಶ್ವಾಸನೆಯನ್ನು ನೀವು ಕೊಡುತ್ತಾ ಬಂದಿದ್ದೀರಿ. ಆದುದರಿಂದ ತಮ್ಮ ಮೂಲಕ ನಾನು ಅವರ ಹತ್ತಿರ ಕೇಳುತ್ತಿದ್ದೇನೆ. ಏನಾಗಿದೆ ನಿಮಗೆ? ಇದು ಒಂದು ತರಹ ನಿರ್ಲಿಪ್ತತೆಯಾಗಿದೆ. ನೀವು ಸರ್ಕಾರ ನಡೆಸುತ್ತೀರಿ, ಒಂದು ಟ್ರಾನ್ಸ್‌ಫಾರ್ಮರ್ ಹಾಕಬೇಕು ಎಂದರೆ ಅಲ್ಲಿ ಒಂದು ತರಹದ ಅಧಿಕಾರಿಗಳು ಬರುತ್ತಾರೆ. ಮೊನ್ನೆ ಯಾರೋ ಒಬ್ಬ ಲೈನ್ಸ್ ಮ್ಯಾನ್ ಏನೋ ಬಂದ. ಲೈನ್ಸ್ ಮ್ಯಾನ್ ಸ್ಕೂಟರಲ್ಲಿ ಬರುತ್ತಾನೆ, ಜೀಪಿನಲ್ಲಿ ಬರುತ್ತಾನೆ, ಕಾರಲ್ಲಿ ಬರುತ್ತಾನೆ. ಅವರ ವಿಚಾರ ತಿಳಿಯಲಿಕ್ಕೆ ವಿಜಿಲೆನ್ಸ್ ಸ್ಕ್ವಾಡ್ ಕರೆಸಬೇಕೆ? ಏನೋ ನಮಗೆ ಅಧಿಕಾರ ಇದೆ, ಶಾಸಕರು ಅಂತ ಹೇಳುವುದಿಲ್ಲ. ಇದು ಏಕಪ್ಪ ಟ್ರಾಪ್ ಆಗುತ್ತದೆ, ಇದು ಫ್ಯೂಸ್ ಹೋಗುತ್ತದೆ ಎಂದು ಏನು ಕೇಳಿದರೂ ಸರಿಯಾದ ಉತ್ತರ ಇಲ್ಲ. ಏಕೆಂದರೆ ನೀರಿಗಿಂತ ಜಾಸ್ತಿ ನಮ್ಮ ಪಂಪ್ ರಿಪೇರಿಗೆ ಹಣ ಖರ್ಚು ಮಾಡುತ್ತೇವೆ. ಒಂದು ಮಧ್ಯಮ ವರ್ಗಕ್ಕೆ ಸೇರಿದಂಥ ನಮಗೆ ಇಷ್ಟು ಕಷ್ಟ ನೋವು ಆಗುತ್ತಿದ್ದರೆ, ಬಡ ರೈತರ ಕಷ್ಟ ಏನು ಎಂದು ಅರ್ಥಮಾಡಿಕೊಳ್ಳಬೇಕು. ಹೆಚ್ಚಿನದಾಗಿ ಇದೊಂದು ತರಹದ ರಾಜಕೀಯ ಪಿತೂರಿ, ಪೊಲಿಟಿಕಲ್ ಮೋಟಿವೇಟೆಡ್, ಇದು ಆಗಲಿಕ್ಕೂ ಕೂಡದು. ಅಲ್ಲಿ ಬರೀ ಜನತಾ ದಳದವರು, ವಿರೋಧ ಪಕ್ಷದ ಜನಗಳನ್ನೇ ಅರೆಸ್ಟ್ ಮಾಡಿದ್ದಾರೆ. ನಿಮ್ಮ ದೇವನಹಳ್ಳಿಯಲ್ಲಿ ಇದರ ನಾಯಕತ್ವ ವಹಿಸಿದಂಥ ಕೆ.ಎಂ.ಎಫ್.ಎಲ್. ಪ್ರೆಸಿಡೆಂಟ್‌ರನ್ನು ಏಕೆ ಅರೆಸ್ಟ್ ಮಾಡಿಲ್ಲ? ಕಾಂಗ್ರೆಸ್ ನಾಯಕರುಗಳನ್ನು ಒಬ್ಬರನ್ನಾದರೂ ಏಕೆ ಅರೆಸ್ಟ್ ಮಾಡಲಿಲ್ಲ? ಆದುದರಿಂದ, ಇದರ ಬಗ್ಗೆ ಸರ್ಕಾರ ಗಮನ ಕೊಡಬೇಕು, ಸೂಕ್ತವಾದ ತೀರ್ಮಾನ ತೆಗೆದುಕೊಳ್ಳಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೆ, ಇದು ಕೇವಲ ಬರೀ ದೇವನಹಳ್ಳಿ ಒಂದೇ ಅಲ್ಲ.

ಅಧ್ಯಕ್ಷರು:- ಎಲ್ಲಾ ಹಂತದಲ್ಲೂ ಉಂಟೇ?

ಶ್ರೀ ವಾಟಾಳ್ ನಾಗರಾಜ್:- ರಾಜ್ಯದ ಬಹುತೇಕ ತಾಲ್ಲೂಕುಗಳಲ್ಲಿ ಈ ವಿದ್ಯುಚ್ಛಕ್ತಿ

ಮಂಡಲಿಯಿಂದ ಬಹಳ ತೊಂದರೆಯಾಗಿದೆ. ಇದೇ ಸದನದಲ್ಲಿ ನನ್ನ ತಾಲ್ಲೂಕು ಬಗ್ಗೆ ಹೇಳಿದೆ. ಕೋಲಾರದ ಬಗ್ಗೆ ಮಾನ್ಯ ಬೈರೇಗೌಡರು ಹೇಳಿದರು. ಇವತ್ತಿನವರೆಗೂ ಸರಿಯಾಗಿಲ್ಲ. ತಮಗೆ ಹೇಳಿದರೆ ನನ್ನ ತಾಲ್ಲೂಕು ಒಂದರಲ್ಲೇ 5 ಕೋಟಿ ರೂಪಾಯಿ ಬೆಳೆ ಹೋಗುತ್ತಿದೆ. ಜೀಪು ಸುಟ್ಟವರನ್ನೆಲ್ಲ ನಾವು ರಾಷ್ಟ್ರದ್ರೋಹಿಗಳು ಎಂದು ಹೇಳುವುದಕ್ಕೆ ಆಗುವುದಿಲ್ಲ. ಜೀಪನ್ನು ಸುಡಬೇಕಾದ ಕಾಲ ಬರುತ್ತದೆ, ಇವರು ಕಾರ್ಯಾಲಯ ನುಗ್ಗಬೇಕಾದ ಕಾಲ ಬರುತ್ತದೆ, ಜನಗಳೇ ಇವರನ್ನೆಲ್ಲಾ ಬಂಧಿಸತಕ್ಕಂತಹ ಕಾಲ ಬರುತ್ತದೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಹತ್ತಾರು ವರ್ಷಗಳಿಂದ ಇದೇ ರೀತಿ ನಡೆದುಕೊಂಡು ಬಂದಿದೆ. ಈ ಮಂಡಲಿಗೆ ಸರಿಯಾದ ರೀತಿ ಕಾಯಕಲ್ಪ ಕೊಡದೇ ಇದ್ದರೆ ನಿಜವಾಗಿಯೂ ದುರಂತ ತಪ್ಪಿದ್ದಲ್ಲ. ಕರ್ನಾಟಕದ ಎಲ್ಲಾ ರೈತರು ಇವರ ವಿರುದ್ಧ ತಿರುಗಿ ಬೀಳತಕ್ಕಂಥ ಕಾಲ ಬರುತ್ತದೆ. ಒಂದು ನೂರು ಟ್ರಾನ್ಸ್‌ಫಾರ್ಮರ್‌ಗಳು ಚಾಮರಾಜನಗರ ತಾಲ್ಲೂಕಿನಲ್ಲೇ ಹೋಗಿದೆ. ಅವುಗಳ ಬಗ್ಗೆ ನಾವು ಕೇಳಿದರೆ ಆಗೊಂದು ಈಗೊಂದು ಕಳುಹಿಸುತ್ತಿದ್ದಾರೆ. ಇದು ಬರೀ ಚಾಮರಾಜನಗರದಲ್ಲಿ ಒಂದೇ ಅಲ್ಲ, ಇಡೀ ಕರ್ನಾಟಕದ ಉದ್ದಗಲಕ್ಕೂ ಪ್ರತಿ ತಾಲ್ಲೂಕಿನಲ್ಲೂ ಇದೇ ಪರಿಸ್ಥಿತಿ ಇದೆ. ಸರ್ಕಾರ ಇವತ್ತು ದೇವನಹಳ್ಳಿಯಲ್ಲಿ ಮಾಡಿರತಕ್ಕಂಥಾದ್ದು ರಾಜಕೀಯವಾದಂತಹ ರೀತಿಯೇ ಹೊರತು ಜೀಪು ಸುಟ್ಟವರನ್ನು ನಾವು ರಾಷ್ಟ್ರದ್ರೋಹಿಗಳು ಎಂದು ಹೇಳುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು:– ತಾವೂ ಈ ಬಗ್ಗೆ ಚರ್ಚೆಗೆ ನೋಟೀಸ್ ಕೊಟ್ಟರೆ, ಇದರ ಬಗ್ಗೆ ಒಂದು ವಿಶೇಷ ಚರ್ಚೆ ಮಾಡೋಣ. ಒಂದು ನೋಟೀಸ್ ಕಳುಹಿಸಿಕೊಡಿ. ಅಷ್ಟರಲ್ಲಿ ಅದಕ್ಕೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಬರುತ್ತಾರೆ.

† ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟ ಹಾಗೆ ನಾನು ಬಹಳ ನೊಂದು ಒಂದು ಮಾತನ್ನು ಹೇಳುತ್ತಿದ್ದೇನೆ. ದೇವನಹಳ್ಳಿ ತಾಲ್ಲೂಕಿನಲ್ಲಿ ನಡೆದಿರತಕ್ಕ ಘಟನೆ ರಾಜ್ಯದಲ್ಲಿ ಎಲ್ಲೂ ಪುನರಾವರ್ತನೆ ಆಗಬಾರದು. ಕೋಲಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನಮ್ಮ ಗೋಳು ಯಾರಿಗೆ ಹೇಳಬೇಕು ಎಂದು ಗೊತ್ತಾಗುತ್ತಿಲ್ಲ. ರೈತರ ಗೋಳು ಈ ಸದನದಲ್ಲಿ ಆರಣ್ಯರೋಧನವಾಗಿದೆ. ಕಳೆದ ಮೂರು ವರ್ಷಗಳಿಂದ ಸತತವಾಗಿ ಇದರ ಬಗ್ಗೆ ಮಾನ್ಯ ಚಂದ್ರೇಗೌಡರು ವಿರೋಧ ಪಕ್ಷದ ನಾಯಕರಾಗಿದ್ದಾಗ, ಹಾಗೂ ವಾಟಾಳ್ ನಾಗರಾಜ್‌ರವರು ಮತ್ತು ಬೈರೇಗೌಡರು ವಿಶೇಷವಾಗಿ ಇದರ ಬಗ್ಗೆ ಅನೇಕ ಸಾರಿ ಚರ್ಚೆ ಮಾಡಿದರು. ಈ ನಮ್ಮ ಸರ್ಕಾರಕ್ಕೆ ನಮ್ಮ ಕೂಗು ಕೇಳಿಸಲೇ ಇಲ್ಲ. ಮಾನ್ಯ ಅಧ್ಯಕ್ಷರೆ, ನಾನು ಅನೇಕ ಸಂದರ್ಭಗಳಲ್ಲಿ ಸರ್ಕಾರದ ಗಮನಕ್ಕೆ ತಂದಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳಿಗೆ ಸಹಿತ ತಿಳಿಸಿದ್ದೇನೆ. ನಿಮ್ಮ ಸರ್ಕಾರಕ್ಕೆ ಏನಾದರೂ ಸ್ವಲ್ಪ ಈ ವರ್ಗದ ಜನಗಳ ಬಗ್ಗೆ ಕಾಳಜಿ ಎನ್ನತಕ್ಕದ್ದು ಇದ್ದರೆ, ದಯವಿಟ್ಟು ಈ ಸಿಸ್ಟಮ್ ಇಂಪ್ರೂವ್‌ಮೆಂಟ್‌ಗೆ ಸ್ವಲ್ಪವಾದರೂ ಕ್ರಮ ತೆಗೆದುಕೊಳ್ಳಿ. ನಮ್ಮ ಕನಕಪುರದ ಕೆ.ಇ.ಬಿ. ಕಛೇರಿಯಲ್ಲಿ 47 ಲಕ್ಷ ರೂಪಾಯಿಗಳ ದುರುಪಯೋಗದ ಪ್ರಕರಣ ನಡೆದಿದೆ. ಇದು ನಡೆದು ಒಂದೂವರೆ ವರ್ಷ ಆಯಿತು. ಈ ವಿಷಯವನ್ನು ನಾವೆಲ್ಲಾ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಈ ಸರ್ಕಾರಕ್ಕೆ ಅಲ್ಲಿರತಕ್ಕಂಥ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಅನ್ನು ಅರೆಸ್ಟ್ ಮಾಡತಕ್ಕಂಥ ತಾಕತ್ತು ಇಲ್ಲ, ಆ ಯೋಗ್ಯತೆಯೂ ಸಹ ಇಲ್ಲ. ಇಲ್ಲಿ ಯಾರೋ ಒಬ್ಬರು ರೈತರು ಬೆಂಕಿ ಹಚ್ಚಿದರು, ಎಂದು ಉದ್ದೇಶಪೂರ್ವಕವಾಗಿಯೇ ಮಾಡಿದ್ದಾರೆ. ನಿಮಗೆ ಏನಾದರೂ ಸರ್ಕಾರ ನಡೆಸಬೇಕು, ಪ್ರಾಮಾಣಿಕವಾದ ಸರ್ಕಾರ ಕೊಡತಕ್ಕಂಥ ಜನ ಎಂದು ಹೇಳುತ್ತಾರಲ್ಲ, ಭ್ರಷ್ಟಾಚಾರದ ಆಗರ ಈ ಕೆ.ಇ.ಬಿ. ಇಲಾಖೆ. ಈ ಇಲಾಖೆಯಲ್ಲಿ ಭ್ರಷ್ಟಾಚಾರ ತುಂಬಿ ತುಳುಕಾಡುತ್ತಿದೆ. ಇದನ್ನು ಸರಿ ಮಾಡುವುದಕ್ಕೆ ಸ್ವಲ್ಪವಾದರೂ ಸಹ ಕಾಳಜಿ ಇಲ್ಲವೇ ಇಲ್ಲವೆಂದು ಬಹಳ ನೊಂದು ಈ ಮಾತನ್ನು ಹೇಳುತ್ತೇನೆ. ಅಲ್ಲಿರತಕ್ಕಂಥವರು ಸಹ ರೈತರ ಮಕ್ಕಳೇ, ಅವರೇನೂ ಬೇರೆಯಲ್ಲ; ಅವರೆಲ್ಲರಿಗೂ ಗೊತ್ತಿದೆ. ಅದು ಏನಾಗಿದೆ ಎಂದರೆ, ಹೇಳಿ ಹೇಳಿ ನಾವೇ ಒಂದು ರೀತಿಯಲ್ಲಿ ಏನಪ್ಪಾ ಎಷ್ಟು ಹೇಳಿದರೂ ಆರ್ಥವಾಗುವುದಿಲ್ಲ ಅನ್ನಿಸಿ

ಬಿಟ್ಟಿದೆ. ಮಾನ್ಯ ಅಧ್ಯಕ್ಷರೆ, ಕಳೆದ ಸಾರಿ ಸಭೆ ಸೇರಿದ್ದಾಗ ಮಾನ್ಯ ಮುಖ್ಯಮಂತ್ರಿಗಳು ನಾನು ಇವತ್ತು ಇರುತ್ತೇನೆಂದು ಹೇಳಿದ್ದರು. ಯಾರೋ ಬಂದಿದ್ದಾರೆಂದು ಅವತ್ತೂ ಬರಲಿಲ್ಲ. ಇವತ್ತು ಕೊನೆಯ ದಿನ, ಎಲ್ಲಾ ಸೇರಿಬಿಡೋಣ ಎಂದು ಹೇಳಿದರು, ಇವತ್ತೂ ಆಗಲಿಲ್ಲ. ಇನ್ನು ಯಾವಾಗ ಇವರು ಬರುವುದು. ಯಾವಾಗ ಇವರು ನಮಗೆ ಉತ್ತರವನ್ನು ಕೊಡುವುದು, ಸದನದ ಬಗ್ಗೆ ಇವರಿಗೆ ಏನಾದರೂ ಗೌರವ ಇಲ್ಲವೇ, ಏಕೆ ಹೀಗೆ ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಸಂಸದೀಯ ವ್ಯವಹಾರಗಳ ಮಂತ್ರಿಗಳಾಗಿದ್ದಾಗ ತಕ್ಷಣ ಎದ್ದು ಎಲ್ಲಾ ವಿಚಾರಗಳಿಗೂ ಮಾಡುತ್ತೇನೆ, ಮಾಡುತ್ತೇನೆ, ಎಂದು ಭರವಸೆಗಳನ್ನು ಕೊಡುತ್ತಾ ಇದ್ದರು. ಒಂದೂ ಆಗಲಿಲ್ಲ, ಅದು ಬೇರೆ ವಿಚಾರ. ಈಗ ಮುಖ್ಯಮಂತ್ರಿಗಳಾಗಿದ್ದಾರೆ. ಇವತ್ತು ಸದನದ ಕೊನೆಯ ದಿನ ಸೇರಬೇಕಾಗಿರತಕ್ಕಂಥದ್ದು ಅನೇಕ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಒಂದಕ್ಕೂ ಸರಿಯಾದ ಉತ್ತರ ನಮಗೆ ಸಿಕ್ಕುತ್ತಿಲ್ಲ. ಇವತ್ತು ನಾವು ಕನ್ನಡಿಗರಿಗೆ ಅನ್ಯಾಯವಾಗಿದೆ; ಅಲ್ಲಿಂದ ವಲಸೆ ಬರುತ್ತಾ ಇದ್ದಾರೆ ಎಂದು ಹೇಳಿದರೆ ಅದಕ್ಕೆ ಇಲ್ಲ, ಇಲ್ಲ, ನಾನು ದೂರವಾಣಿಯಲ್ಲಿ ಮಾತನಾಡಿದ್ದೇನೆ ಎಂದು ಹೇಳಿದರು. ಇವರ ಮುಖದ ಮೇಲೆ ರಪ್ ಎಂದು ಹೊಡೆದ ಹಾಗೆ ಮಾನ್ಯ ಪ್ರಧಾನ ಮಂತ್ರಿಗಳು ಬೊಂಬಾಯಿಯಿಂದ ವಲಸೆ ಹೋಗುತ್ತಿದ್ದಾರೆ ಎಂದು ಹೇಳಿಕೆ ಕೊಟ್ಟಿದ್ದಾರೆ. ಇವತ್ತು ದೇವನಹಳ್ಳಿಯಲ್ಲಿ ಇಷ್ಟೊಂದು ಗಲಾಟೆಯಾಗಿದೆ, ಸದನ ಸೇರಿದೆ, ಕೆ.ಇ.ಬಿ. ಬಗ್ಗೆ ಏನಾದರೂ ಒಂದು ಕ್ರಮ ತೆಗೆದುಕೊಳ್ಳುತ್ತೇವೆ ಎಂಬ ಸೌಜನ್ಯತೆಯನ್ನೂ ಈ ಸರ್ಕಾರ ತೋರಿಸುವುದಿಲ್ಲ, ಎನ್ನುವುದಾದರೆ ಮಾನ್ಯ ಅಧ್ಯಕ್ಷರೆ, ನಾನು ಬಹಳ ನೊಂದು ಹೇಳುತ್ತಿದ್ದೇನೆ, ದಯವಿಟ್ಟು ಕೇಳಿ ನಮಗೆಲ್ಲರಿಗೂ ಸಹಿತ ರೈತರುಗಳು ಶಾಪ ಹಾಕುತ್ತಿದ್ದಾರೆ. ನೀವು ಏಕೆ ಎಂ.ಎಲ್.ಎ.ಗಳಾಗಿದ್ದೀರಿ ನೀವು ಹಳ್ಳಿಗಳಿಗೆ ಬರಬೇಡಿ, ಎಂದು ಹೇಳುತ್ತಾ ಇದ್ದಾರೆ. ಮಾನ್ಯ ಚಿಕ್ಕೇಗೌಡರಿಗೂ ಹೇಳುತ್ತಿದ್ದಾರೆ, ನಿಮಗೂ ಹೇಳುತ್ತಿದ್ದಾರೆ. ಗೊಬ್ಬರದ ಬೆಲೆಯ ಬಗ್ಗೆಯೂ ಅಷ್ಟೆ, ಕರೆಂಟ್ ಬಗ್ಗೆಯೂ ಅಷ್ಟೆ, ನಮಗೆಲ್ಲ ಶಾಪ ಹಾಕುತ್ತಿದ್ದಾರೆ. ಏಕೆ ಈ ಸರ್ಕಾರದವರು ಈ ತರಹ ಮಾಡುತ್ತಿದ್ದಾರೆ. ಮಾನ್ಯ ರಾಜಶೇಖರಮೂರ್ತಿಯವರು ಹಿರಿಯ ಸದಸ್ಯರು, ಮಂತ್ರಿಮಂಡಲದಲ್ಲಿದ್ದೀರಿ. ಇದರ ಬಗ್ಗೆ ತೀವ್ರವಾಗಿ ತಾವು ಕ್ರಮವನ್ನು ತೆಗೆದುಕೊಳ್ಳಬೇಕು. ಈಗ ಬೇಸಿಗೆ ಪ್ರಾರಂಭವಾಗಿದೆ. ಒಂದು ಕಡೆ ಕರೆಂಟ್ ಬಿಲ್ ಕಟ್ಟುವುದಕ್ಕೆ ನಿಮ್ಮ ಸರ್ಕಾರದಲ್ಲಿ ದುಡ್ಡು ಇಲ್ಲ. ಆದ್ದರಿಂದ ದುಡ್ಡು ಕೊಡಬೇಡಿ, ಬಿಲ್ ಪಾಸ್ ಮಾಡಬೇಡಿ, ಎಂದು ಟ್ರೆಜರಿಗಳಿಗೆ ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದೀರಿ. ಈ ಕಡೆ ನೀವು ಕರೆಂಟ್ ಸಪ್ಲೈ ಮಾಡುವುದಿಲ್ಲ. ಹಾಗಾದರೆ ಜನ ನೀರು ಹೇಗೆ ಕುಡಿಯಬೇಕು? ತಾವು ದಯವಿಟ್ಟು ಇದರ ಬಗ್ಗೆ ವಿಚಾರ ಮಾಡಿ. **ತಾವು ನನಗೆ ಇದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ನಿಮಗೆ ಅಭಿನಂದನೆಗಳು.** ಆದರೆ ದಯವಿಟ್ಟು ಈ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳಬೇಕೆಂದು ತಾವು ಇವರಿಗೆ ಕಿವಿ ಹಿಂಡಿ ಹೇಳಬೇಕು ಎಂದು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ದೇವನಹಳ್ಳಿ, ಬೆಂಗಳೂರು-ಬಳ್ಳಾರಿ ಮೆಯಿನ್ ರೋಡ್‌ನಲ್ಲಿದೆ. ಇಲ್ಲಿಗೆ ಹೋಗಲಿಕ್ಕೆ ಅರ್ಧ ಗಂಟೆ ಬರಲಿಕ್ಕೆ ಅರ್ಧ ಗಂಟೆ ಸಾಕು. ದಯಮಾಡಿ ಯಾರಾದರೂ ಮಂತ್ರಿಗಳಿಗೆ ಹೋಗಿ ಬರಲು ಸೂಚನೆ ಕೊಡಿ, ಅಲ್ಲಿನ ಪರಿಸ್ಥಿತಿಯನ್ನು ತಿಳಿದುಕೊಂಡು ಈ ಸದನಕ್ಕೆ ವರದಿ ಕೊಡಲಿ. ಇದಕ್ಕಾದರೂ ಸಹಾಯ ಮಾಡಿ.

ಶ್ರೀ ಹೆಚ್. ಏಕಾಂತಯ್ಯ:- ಮಾನ್ಯ ಅಧ್ಯಕ್ಷರೆ, ದೇವನಹಳ್ಳಿ ಘಟನೆಗಿಂತ ತೀವ್ರವಾದ ಘಟನೆ ಇವತ್ತು ಚಿತ್ರದುರ್ಗದಲ್ಲಿ ನಡೆದಿದೆ. ಸಾರ್ವಜನಿಕರು, ಹಾಗೂ ರೈತರು ಚಿತ್ರದುರ್ಗದ ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರ ನಿವಾಸಕ್ಕೆ ನುಗ್ಗಿ ಅವರಿಗೆ ಪ್ರತಿಭಟನೆ ಮಾಡಿದ್ದಾರೆ. ಅವರ ಬೇಡಿಕೆ ಏನೆಂದರೆ ಕನಿಷ್ಟ ಪಕ್ಷ ಕುಡಿಯುವ ನೀರಿಗಾದರೂ ವಿದ್ಯುತ್ತನ್ನು ಒದಗಿಸಲಿ ಎಂದು. ಕೆ.ಇ.ಬಿ.ಯವರು ಇವತ್ತಿನವರೆಗೆ ಅಲ್ಲಿ ವಿದ್ಯುತ್‌ನ್ನು ಸಮರ್ಪಕವಾಗಿ ವ್ಯವಸ್ಥೆ ಮಾಡಿಲ್ಲ. ಇದು ಕೇವಲ ದೇವನಹಳ್ಳಿಗೆ ಸಂಬಂಧಪಟ್ಟಿದ್ದಲ್ಲ. ಇಂತಹ ಗಲಭೆಗಳು ಹಲವಾರು ಕಡೆಗಳಲ್ಲಿ

ಆಗಿದೆ. ರೈತರು ಮತ್ತು ನಾಗರಿಕರು ಕೆ.ಇ.ಬಿ. ಮುಂದೆ ಪ್ರತಿಭಟನೆ ಮಾಡಿದ್ದಾರೆ. ಈ ರೀತಿಯಾಗಿ ಅವರುಗಳು ಕೆ.ಇ.ಬಿ. ಕಛೇರಿಗಳ ಮುಂದೆ ಪ್ರತಿಭಟನೆ ಮಾಡದೆ ಹಾಗೆ ಸರ್ಕಾರ ತೀವ್ರವಾಗಿ ಕ್ರಮವನ್ನು ತೆಗೆದುಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಮುಖ್ಯವಾಗಿ ವಿದ್ಯುತ್ ಟ್ರಾನ್ಸ್‌ಫಾರ್ಮರ ಬಗ್ಗೆ ನಾವು ನಿಯಮ 68ರ ಕೆಳಗೆ ಸೂಚನೆ ಕಳುಹಿಸಿದ್ದೇವೆ. ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಟಿ.ಎಂ. ಮಂಜುನಾಥ್:– ವಿರೋಧವಾದ ಸದಸ್ಯರುಗಳು ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಕಳೆದ 2 ವರ್ಷಗಳಿಂದ ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುತ್‌ನ್ನು ಕೊಡುವ ದೃಷ್ಟಿಯಿಂದ ಅನೇಕ ಕೋಟಿ ರೂಪಾಯಿ ಖರ್ಚು ಮಾಡಿ ಟ್ರಾನ್ಸ್‌ಫಾರ್ಮರ್ಸ್, ಹಾಗೂ ಲೈನುಗಳನ್ನು ಹೊಸದಾಗಿ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಸರ್ಕಾರದ ಪರವಾಗಿ ಉತ್ತರ ಕೊಡಲು ಮುಖ್ಯಮಂತ್ರಿಗಳಿದ್ದಾರೆ. ಇವರು ಏನು ಉತ್ತರ ಕೊಡುತ್ತಿದ್ದಾರೆ?

ಅಧ್ಯಕ್ಷರು:– ಅವರು ಉತ್ತರ ಕೊಡುತ್ತಿಲ್ಲ, ಅವರ ಅಭಿಪ್ರಾಯ ಹೇಳುತ್ತಿದ್ದಾರೆ. ಉತ್ತರ ಅವರೇಕೆ ಕೊಡುತ್ತಾರೆ?

ಶ್ರೀ ಟಿ.ಎಂ. ಮಂಜುನಾಥ್:– ನಮ್ಮ ತುಮಕೂರು ಜಿಲ್ಲೆಯಲ್ಲಿ ಸಹಿತ ಇದೇ ರೀತಿಯ ವಿದ್ಯುಚ್ಛಕ್ತಿ ತೊಂದರೆ ಇದೆ. ಅವರು ಹೇಳಿರತಕ್ಕದ್ದು ಸಹಜವಾಗಿದೆ, ನಾವು ಇಲ್ಲ, ಎಂದು ಹೇಳುತ್ತಿಲ್ಲ. ಆದರೆ ನಿಯಮ 68ರ ಕೆಳಗೆ ಚರ್ಚೆಗೆ ತಾವು ಅವಕಾಶ ಕೊಟ್ಟಿದ್ದೀರಿ ಅಂಥ ಕಾಲದಲ್ಲಿ ಮಂತ್ರಿಗಳು ಬರುತ್ತಾರೆ ಉತ್ತರ ಹೇಳುತ್ತಾರೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:– ಮಂತ್ರಿಗಳು ಬರುವವರೆಗೆ ಈ ಸದನ ಕಾಯುತ್ತಿರಬೇಕೆ?

ಶ್ರೀ ಟಿ.ಎಂ. ಮಂಜುನಾಥ್:– ಹೊರಗಡೆ ದೇಶಕ್ಕೆ ದುಡ್ಡು ಕೊಟ್ಟು ಕರೆಂಟ್ ತೆಗೆದುಕೊಂಡು ಬರುವುದಕ್ಕೆ ಆಗುತ್ತದೆಯೇ? ತಮ್ಮ ಆತುರದ ಪ್ರಕಾರ ಸರ್ಕಾರ ಸ್ಪಂದಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್:– ಮಂತ್ರಿಗಳಿಗಾಗಿ ನಾವು ಕಾಯಬೇಕೆ?

ಶ್ರೀ ಟಿ.ಎಂ. ಮಂಜುನಾಥ್:– ಇದು ಈ ರಾಜ್ಯದ ಸಮಸ್ಯೆ ಆಗಿದೆ. ಸಂಬಂಧಪಟ್ಟ ಮಂತ್ರಿಗಳು ಬಂದಾಗ ಅದರ ಬಗ್ಗೆ ವಿಚಾರ ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್:– ವಿದ್ಯುಚ್ಛಕ್ತಿ ಮಂತ್ರಿಗಳು ಯಾರು? ಮಾನ್ಯ ಸಂಸದೀಯ ಸಚಿವರು ಇಲ್ಲ, ಮುಖ್ಯಮಂತ್ರಿಗಳು ಇಲ್ಲ, ಸರ್ಕಾರದ ಪರವಾಗಿ ಯಾರು ಸ್ವಾಮಿ ಉತ್ತರ ಕೊಡುತ್ತಾರೆ. ಮಂಜುನಾಥ್‌ರವರು ಉತ್ತರ ಕೊಡುತ್ತಾರೆಯೇ?

ಶ್ರೀ ಟಿ.ಎಂ. ಮಂಜುನಾಥ್:– ಒಂಭತ್ತೂವರೆ ಲಕ್ಷ ಪಂಪ್ ಸೆಟ್ಟುಗಳನ್ನು ಇಡೀ ರಾಜ್ಯದಲ್ಲಿ ಕೊಟ್ಟಿದ್ದೇವೆ. ಏನೂ ಮಾಡಿಲ್ಲ ಎಂದು ಹೇಳಬೇಡಿ. ಅಧ್ಯಕ್ಷರು ಅಪ್ಪಣೆ ಕೊಟ್ಟಿದ್ದಾರೆ, ಅವರು ಬರುತ್ತಾರೆ ಉತ್ತರ ಹೇಳುತ್ತಾರೆ. ಮಂತ್ರಿಗಳು ಇಲ್ಲದೇ ಇರುವಾಗ ತಾವು ಏತಕ್ಕೆ ಹೇಳುತ್ತೀರಿ. ಇಷ್ಟು ಸಮಾಧಾನ ಇಲ್ಲದೆ ಇದ್ದರೆ ಹೇಗೆ? ನಿಮಗಿರುವಷ್ಟು ಕಳಕಳಿ ನಮಗೂ ಇದೆ.

ಶ್ರೀ ವಾಟಾಳ್ ನಾಗರಾಜ್:– ಸಂಬಂಧಪಟ್ಟ ಮಂತ್ರಿಗಳು ಸುಮ್ಮನೆ ಕುಳಿತಿದ್ದಾರೆ, ನೀವು ಏತಕ್ಕೆ ಬಾಯಿ ಬಿಡುತ್ತಿದ್ದೀರಿ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಔರಾದ್ ತಾಲ್ಲೂಕಿನಲ್ಲಿಯೂ ಸಹ ಒಂದು

ತಿಂಗಳಿನಿಂದ ಲೈಟ್ ಇಲ್ಲ. ನಾನು ಅಲ್ಲಿಗೆ ಹೋಗಿದ್ದಾಗ ನನ್ನನ್ನು ಕೂಡಿಹಾಕಿದರು. ಅಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ವಿದ್ಯುತ್ ಇಲ್ಲದೆ ಬಹಳ ತೊಂದರೆ ಆಗಿದೆ. ಮಂತ್ರಿಗಳು ಬರುತ್ತೇನೆ ಎಂದು ಹೇಳುತ್ತಾರೆ, ಬರುವುದಿಲ್ಲ. ಎಕ್ಸಿಕ್ಯೂಟೀವ್ ಇಂಜಿನಿಯರ್‌ರವರನ್ನು ಕೇಳಿದರೆ ನಾವೇನು ಮಾಡುವುದಕ್ಕೆ ಆಗುತ್ತದೆ ಎಂದು ಹೇಳುತ್ತಾರೆ. ಯಾರು ಮಾಡಬೇಕು, ಸರ್ಕಾರಕ್ಕೆ ಜವಾಬ್ದಾರಿ ಇಲ್ಲವೇ, ರೈತರ ಕಡೆ ಯಾರು ನೋಡಬೇಕು?

ಅಧ್ಯಕ್ಷರು:- ನಾವೇ ನೋಡಬೇಕು ರೈತರ ಕಡೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಮಂಜುನಾಥ್‌ರವರು ಉತ್ತರ ಕೊಡುತ್ತಾರೆಯೆ? ನಮ್ಮೆಲ್ಲರಿಗೂ ಲೈಟ್ ಒದಗಿಸಿಕೊಟ್ಟರೆ ಬಹಳ ಸಂತೋಷ.

ಶ್ರೀ ಟಿ.ಎಂ. ಮಂಜುನಾಥ್:- ಗುರುಪಾದಪ್ಪನವರು ಊರಿಗೆ ಹೋಗುವುದಿಲ್ಲ, ಇಲ್ಲಿ ಭಾಷಣ ಮಾಡುತ್ತಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಭಾಷಣ ಇಲ್ಲೆ ಮಾಡಬೇಕು.

ಶ್ರೀ ಎ.ಕೆ. ಅನಂತಕೃಷ್ಣ:- ಮಾನ್ಯ ಚಿಕ್ಕೇಗೌಡರು ದೇವನಹಳ್ಳಿ ಪಕ್ಕದವರೇ,

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಅಲ್ಲಿ ಬಹಳ ತೊಂದರೆ ಇದೆ. ಅಲ್ಲಿ ಲೈಟ್ ಇಲ್ಲ, ಅವರನ್ನು ಹೇಳುವವರು ಕೇಳುವವರು ಯಾರೂ ಇಲ್ಲ. ನಾವೇನು ಮಾಡಬೇಕು?

ಅಧ್ಯಕ್ಷರು:- ಇವತ್ತಿನ ದಿವಸ ಕಾರ್ಯ ಸೂಚಿ ಪಟ್ಟಿಯಲ್ಲಿ ಇದು ನಮೂದು ಆಗಿಲ್ಲ. ಯಾವ ಮಂತ್ರಿಗಳಿಗೂ ಹೇಳಿಲ್ಲ, ಮೊದಲು ಕಾಗದ ಬರೆದು ಇದನ್ನು ಇವತ್ತು ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ಹೇಳಿದ್ದರೆ ಸಂಬಂಧಪಟ್ಟ ಸಚಿವರಿಗೆ ಮೊದಲೇ ಸೂಚನೆ ಕೊಡುತ್ತಿದ್ದೆವು. ಸಚಿವರು ಅಂದರೆ ಮುಖ್ಯಮಂತ್ರಿಗಳು. ಅವರೇ ಈ ವಹಿವಾಟನ್ನು ನೋಡಿಕೊಳ್ಳುತ್ತಿದ್ದಾರೆ. ನಾನು ಮುಖ್ಯಮಂತ್ರಿಗಳಿಗೆ ತಿಳಿಸುತ್ತಿದ್ದೆ. ಆದರೆ ತಾವು 11.15ಕ್ಕೆ ನೋಟೀಸ್‌ನ್ನು ಕೊಟ್ಟಿದ್ದೀರಿ....

Sri R.V.DESHAPANDE:- I have given this notice at 11-30 A.M.

ಶ್ರೀ ವಾಟಾಳ್ ನಾಗರಾಜ್:- ಈ ಕಣ್ಣೀರಿನ ಕಥೆಯನ್ನು ಪ್ರತಿಸಲವೂ ಹೇಳುತ್ತಲೇ ಇರುತ್ತೇವೆ. ಆದರೆ ಏನೂ ಆಗುತ್ತಿಲ್ಲ.

ಅಧ್ಯಕ್ಷರು:- ಹಿಂದಿನ ಮುಖ್ಯಮಂತ್ರಿಗಳು ಇದರ ಬಗ್ಗೆ ನಮ್ಮೆಲ್ಲರನ್ನು ಕರೆಯಿಸಿ ಒಂದು ಸಭೆಯನ್ನು ಮಾಡಿದ್ದಾರೆ....

ಶ್ರೀ ವಾಟಾಳ್ ನಾಗರಾಜ್:- ಸಭೆಯನ್ನು ಕರೆದಿಲ್ಲ. ಈ ಸದನದಲ್ಲಿ ಸಭೆಯನ್ನು ಕರೆಯುತ್ತೇವೆ ಎಂದು ಭರವಸೆ ಕೊಟ್ಟರು ಆದರೆ ಸಭೆಯನ್ನು ಕರೆಯಲಿಲ್ಲ. ಅಂದಿನ ಸಂಸದೀಯ ಸಚಿವರು ಇಂದಿನ ಮುಖ್ಯಮಂತ್ರಿಗಳು. ಆದರೂ ಸಹಾ ಸಭೆಯನ್ನು ಕರೆಯಲಿಲ್ಲ.

ಅಧ್ಯಕ್ಷರು:- ನಾವು ಅವರಿಗೆ ತಿಳಿಸುತ್ತೇನೆ; ಗ್ರಾಮಾಂತರ ಪ್ರದೇಶಗಳಲ್ಲಿ ಈ ವಿಚಾರ ಬಹಳ ಗಂಭೀರ ಸ್ವರೂಪವನ್ನು ತಳೆದಿದೆ ಎಂಬುದರಲ್ಲಿ ಎರಡು ಅಭಿಪ್ರಾಯ ಇಲ್ಲ. ಅವರು ಅದನ್ನೇ ಹೇಳುತ್ತಿದ್ದಾರೆ. ನಮ್ಮೆಲ್ಲರ ಅನುಭವವೂ ಕೂಡ ಅದೆ. ಗ್ರಾಮಾಂತರ ಪ್ರದೇಶಕ್ಕೆ ಹೋದರೆ ತಮ್ಮನ್ನು ಮೊದಲು ಪ್ರಶ್ನೆ ಕೇಳತಕ್ಕಂಥದ್ದು ವಿದ್ಯುಚ್ಛಕ್ತಿ ವ್ಯವಹಾರದ ಬಗ್ಗೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮೆಲ್ಲರನ್ನು ಕರೆದು ಈ ವಿದ್ಯುಚ್ಛಕ್ತಿ ಸರಬರಾಜಿನ ಬಗ್ಗೆ ಯೋಗ್ಯವಾದಂಥ ಮತ್ತು ಅರ್ಥಪೂರ್ಣವಾದಂಥ ತೀರ್ಮಾನಗಳನ್ನು ತಮ್ಮ ಸಹಕಾರದಿಂದ ತೆಗೆದುಕೊಳ್ಳಬೇಕೆಂದು ಸೂಚನೆ ಮಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಮಾನ್ಯ ಅಧ್ಯಕ್ಷರೇ ಮೂರು ದಿವಸಗಳಿಂದಲೂ ಸತತವಾಗಿ ಫೆಲ್ಯೂರ್ ಆಫ್ ಟ್ರಾನ್ಸ್‌ಫಾರ್ಮರ್‌ಸ್ ಬಗ್ಗೆ ಅಜೆಂಡಾದಲ್ಲಿ ಬರುತ್ತಿದೆ. ಮಾನ್ಯ ಮಂತ್ರಿಗಳಿಗೆ ಸೂಚನೆ ಇಲ್ಲವೆಂದರೆ ಸರ್ಕಾರಕ್ಕೆ ನಾವು ಏನು ಹೇಳಬೇಕು. 3-4 ದಿವಸಗಳಿಂದಲೂ ಸತತವಾಗಿ ಅಜೆಂಡಾದಲ್ಲಿ ಬರುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಬರಲಿಲ್ಲ.

ಅಧ್ಯಕ್ಷರು:- ಸಾಧಾರಣವಾಗಿ ಇವತ್ತು ನಮ್ಮ ಸಭೆ ಸೇರತಕ್ಕಂಥ ಪರಿಸ್ಥಿತಿಯಲ್ಲಿರಲಿಲ್ಲ. ಆದ್ದರಿಂದ ಇದು ಎಕ್ಸ್‌ಟೆಂಡೆಡ್ ಸೆಷನ್.

ಶ್ರೀ ಜೆ.ಸಿ. ಮಾಧುಸ್ವಾಮಿ:- ಅಜೆಂಡಾದಲ್ಲಿ ಇದೆ.

ಅಧ್ಯಕ್ಷರು:- ಮುಂದಿನ ತಿಂಗಳ ಬಜೆಟ್ ಸೆಷನ್ ಸೇರುತ್ತದೆ. ವಿದ್ಯುಚ್ಛಕ್ತಿ ಡಿಮ್ಯಾಂಡ್ ಈ ಸದನದಲ್ಲಿ ಪಾಸ್ ಆಗಬೇಕಾಗುತ್ತದೆ. ಆಗ ನಿಮಗೆಲ್ಲರಿಗೂ ಅದರ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಸ್ವಾಮಿ ತಾವು ರೈತರ ಮಗ ಎಂದು ಹೇಳಿ ಬಹಳವಾಗಿ ನೊಂದು ತಮ್ಮನ್ನು ಕೇಳಿಕೊಳ್ಳುತ್ತಿದ್ದೇವೆ. ಕನಿಷ್ಟ ಪಕ್ಷ ತಾವು ಇಲ್ಲಿ ಬಂದು ಕುಳಿತುಕೊಂಡು ಚರ್ಚೆ ಮಾಡಬೇಕೆಂದು 15 ದಿವಸ ಸೆಷನ್ ನಡೆದುದಕ್ಕೆ ಏನೇನೂ ಸಿಕ್ಕಿಲ್ಲ. ನಾವು ಏನು ಡೆವಲಪ್‌ಮೆಂಟ್ ವರ್ಕ್ಸ್ ಮಾಡುವುದಕ್ಕಾಗಲಿಲ್ಲ. ವಿದ್ಯುಚ್ಛಕ್ತಿಯನ್ನಾದರೂ ಸ್ವಲ್ಪ ಕರೆಕ್ಟಾಗಿ ಸಪ್ಲೈ ಮಾಡಿಬಿಟ್ಟರೆ ಸಾಕಾಗಿದೆ. ನಾವು ಮತ್ತೆ ಫೆಬ್ರವರಿ 15ನೇ ತಾರೀಖು ಸೇರುತ್ತೇವೆಂದು ಹೇಳಿದ್ದಾರೆ. ಕ್ಯಾಬಿನೇಟ್ ಎಕ್ಸ್‌ಪ್ಯಾನ್‌ಷನ್ ಮಾಡುತ್ತೇವೆಂದು ಹೇಳಿದ್ದರು. ಅಷ್ಟು ಹೊತ್ತಿಗೆ ಸರ್ಕಾರ ಉಳಿಯುತ್ತದೆಯೋ ಇಲ್ಲವೋ ನನಗಂತೂ ಸಮಸ್ಯೆಯಾಗಿದೆ. ಕೊನೆಯಪಕ್ಷ ಇರುವರಿಗಾದರೂ ಆ ಕೆಲಸ ಮಾಡಲಿಕ್ಕೆ ದಯವಿಟ್ಟು ಹೇಳಬೇಕು.

ಅಧ್ಯಕ್ಷರು:- ಆಗಬಹುದು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಮುಖ್ಯಮಂತ್ರಿಗಳು ಬಂದತಕ್ಷಣವೇ ಒಂದು ಹೇಳಿಕೆಯನ್ನು ಕೊಡಿಸಿ ಸ್ವಾಮಿ. ಈ ಸದನ ಮುಗಿಯುವುದರೊಳಗೆ ಈ ಒಂದು ಹೇಳಿಕೆ ತಾವು ಕೊಟ್ಟಿದ್ದೀರಿ. ಏತಕ್ಕೆಂದರೆ ಅವರು ಒಂದು ಭರವಸೆಯನ್ನು ಕೊಡಲಿ. ಇಲ್ಲದಿದ್ದರೆ ತೊಂದರೆಯಾಗುತ್ತದೆ. ಇನ್ನು 15-20 ದಿವಸಗಳು ಕಳೆದಮೇಲೆ ಮತ್ತೆ ಅಧಿವೇಶನ ಸೇರುವಂಥದ್ದು.

ಶ್ರೀ ಆರ್.ವಿ. ದೇಶಪಾಂಡೆ:- ಇದು ಬಹಳ ಮುಖ್ಯವಾದ ವಿಷಯವಾಗಿದೆ. ದೇವನಹಳ್ಳಿಯಲ್ಲಿ ವರ್ಷದಿಂದ ಅತ್ಯಾಚಾರ, ಅನ್ಯಾಯ ನಡೆದಿದೆ. ಇದರ ಬಗ್ಗೆ ಸರ್ಕಾರದವರು ಒಂದು ಹೇಳಿಕೆ ಕೊಡಬೇಕೆಂದು ಒಂದು ಆದೇಶ ಕೊಡಲಿ, at least by today evening.

ಶ್ರೀ ಜೆ.ಸಿ. ಮಾಧುಸ್ವಾಮಿ:- ನಮ್ಮ ಸ್ಥಿತಿ ಅರ್ಥವಾಗಬೇಕು. ಐದು ದಿವಸದಿಂದ ಈ ವಿಷಯಕ್ಕಾಗಿ ಕಾಯುತ್ತಿರತಕ್ಕಂಥದ್ದು ತಮಗೆ ಗೊತ್ತಿದೆ. ಬುಧವಾರದ ದಿವಸ ಮಾನ್ಯ ಮುಖ್ಯಮಂತ್ರಿಗಳು ಇಲ್ಲವೆಂದು ಡೆಫರ್ ಮಾಡಿದ್ದರು.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ ನನಗೆ ಅರ್ಥವಾಗುತ್ತಿಲ್ಲ. ಇಷ್ಟು ಆಕ್ರೋಷ ವ್ಯಕ್ತಮಾಡಿದರೂ ಒಬ್ಬರಾದರೂ ಮಂತ್ರಿಗಳು ಎದ್ದು ಏನಾದರೂ ಒಂದು ಜವಾಬು ಹೇಳಬೇಕಲ್ಲ. ಸರ್ಕಾರ ಸತ್ತು ಹೋಗಿಬಿಟ್ಟಿದೆಯೇ?

ಅಧ್ಯಕ್ಷರು:- ಮಾನ್ಯ ಡಿಸೋಜರವರು ಹೇಳುತ್ತಾರೆ.

SRI D.B. CHANDRE GOWDA:- What is wrong with this Government?

MR. SPEAKER:- Nothing is wrong with the Government.

SRI D.B. CHANDRE GOWDA:- Let them come out.

MR.SPEAKER:- Everything is right with the Government.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನಮ್ಮದೇನು, ನಮ್ಮ ಸರ್ಕಾರದ ನೀತಿ ಏನು ಎಂದು ಒಬ್ಬರೂ ಹೇಳುತ್ತಿಲ್ಲ.

ಅಧ್ಯಕ್ಷರು:- ನಾನು ಅವರಿಗೆ ಅವಕಾಶವನ್ನು ಕೊಟ್ಟರೆ ತಾನೇ ಅವರು ಹೇಳಬೇಕು. ನಾನು ಅವರಿಗೆ ಅವಕಾಶವನ್ನೇ ಕೊಡುತ್ತಿಲ್ಲವಲ್ಲ. ನಾನು ಹೇಳುತ್ತಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳು....

ಶ್ರೀ ಡಿ.ಬಿ. ಚಂದ್ರೇಗೌಡ:- ತಾವು ಡೈರೆಕ್ಷನ್ ಕೊಟ್ಟರೂ ಕೂಡ ಹೇಳದಿದ್ದರೆ!

ಅಧ್ಯಕ್ಷರು:- ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ. ಆದರ ಬಗ್ಗೆ ನಿಮಗೆ ನಾನೇ ಹೇಳಿದ್ದೇನೆ ಅವರ ಗಮನವನ್ನು ಸೆಳೆದು....

ಶ್ರೀ ಡಿ.ಬಿ. ಚಂದ್ರೇಗೌಡ:- ಏನಾದರೂ ಒಂದು ಹೇಳಲಿ.

ಅಧ್ಯಕ್ಷರು:- ನಾನು ಹೇಳಿದರೆ ನಿಮಗೆ ಸಮಾಧಾನವಾಗುವುದಿಲ್ಲವೆ?

(ಗೊಂದಲ)

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:- ಮಾನ್ಯ ಅಧ್ಯಕ್ಷರೇ, ನಮ್ಮ ಮುಖ್ಯಮಂತ್ರಿಗಳು ಬಂದು, ಅದಕ್ಕೆ ಸರಿಯಾದ ಉತ್ತರವನ್ನು ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ಅತ್ತು ಕರೆದು ಔತಣ ಮಾಡಿಸಿಕೊಂಡ ಹಾಗಾಯಿತು.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:- ಮಾನ್ಯ ಅಧ್ಯಕ್ಷರೇ ನಿಮ್ಮ ಗಮನಕ್ಕೆ ತರಬಯಸುವುದೇನೆಂದರೆ ಮೊನ್ನೆ ಪತ್ರಿಕೆಗಳಲ್ಲಿ "Privilege Notice against..." ಏತಕ್ಕೆಂದರೆ ನಮ್ಮ ಚಂದ್ರೇಗೌಡರು ಮತ್ತಿತರ ಸದಸ್ಯರು ಪ್ರಿವಿಲೇಜ್ ಮೋಷನ್ ಮೂವ್ ಮಾಡುವಾಗಲೇ ತಿದ್ದುಪಡಿ ಮಾಡಿದ್ದಾರೆ. ಮುಖ್ಯಮಂತ್ರಿಗಳ ಬಗ್ಗೆ ಹಕ್ಕುಚ್ಯುತಿ ಸೂಚಿಸುತ್ತೇವೆಂದು ಅವರು ಹೇಳಿದ್ದಾರೆ... But it has been reported in all the Papers.

ಅಧ್ಯಕ್ಷರು:- ಈ ತಿದ್ದುಪಡಿಗಳ ಬಗ್ಗೆ ಸಮಿತಿಯ ಒಂದು ಪ್ರಕಟಣೆಯನ್ನು ಹೊರಡಿಸಿ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:- ಥ್ಯಾಂಕ್ಸ್.

ಶ್ರೀ ಡಿ.ಬಿ. ಚಂದ್ರೇಗೌಡ:- ಆ ದಿವಸ ಚರ್ಚೆಗೆ ಬಂದ ಕಾಲದಲ್ಲಿ ನಾನು ಇದ್ದೆ. 31-3-92ಕ್ಕೆ ಈ ವಿಚಾರ ಚರ್ಚೆ ಬಂದಿತ್ತು. 2-4ಕ್ಕೆ ಹೈಕೋರ್ಟಿನಿಂದ ವಿವರಣೆ ಬಂದಿತು. ಹಿಂದೆ ಕೊಟ್ಟಂಥ ಪ್ರಶ್ನೆಗೆ ಬಂದಿದ್ದ ಉತ್ತರವನ್ನೇ ಈ ಪ್ರಶ್ನೆಗೂ ಉತ್ತರ ಹೇಳಿರುವುದರಿಂದ ಹಕ್ಕುಚ್ಯುತಿಯಾಗುತ್ತದೆಂದು ಆಗ ನಾವು ಹೇಳಿದ್ದೆವು. ಆದರೆ ಪ್ರಶ್ನೆಗೆ ಉತ್ತರ ಬಂದಾಗ ಆಗ ನಾವು ಲೆಕ್ಕಹಾಕಿದೆವು, ಇವರೇ ಲಾ ಮಿನಿಸ್ಟರ್ ಆದ್ದುದರಿಂದ ಹೈಕೋರ್ಟಿನ ವ್ಯಾಪ್ತಿ ನಿಮಗೆ ಬರುತ್ತದೆಯೋ ಇಲ್ಲ, ಡಿ.ಪಿ.ಎ.ಆರ್.ಗೆ ಬರುತ್ತದೆಯೋ? ಇದನ್ನು ಡಿ.ಪಿ.ಆರ್.ಗೆ ಹಾಕುವಾಗ, ಮುಖ್ಯಮಂತ್ರಿಗಳು ಡಿಪಿಆರ್‌ನ ನಡೆಸುತ್ತಿದ್ದಾರೆ. ಆದರೆ ಅಂದು ಸದನದಲ್ಲಿ ಉತ್ತರ ಹೇಳಿದವರು ಇವತ್ತಿನ ಮುಖ್ಯಮಂತ್ರಿಗಳಾಗಿರತಕ್ಕಂತಹ ಶ್ರೀಮಾನ್ ವೀರಪ್ಪ ಮೊಯಿಲಿಯವರು. ಆಗ ಹಕ್ಕುಚ್ಯುತಿ ನಿರ್ಣಯ ತಾವು ಮಾಡುವಾಗ ಸದನಕ್ಕೆ ಉತ್ತರ ಹೇಳಿದಂಥ ಮುಖ್ಯಮಂತ್ರಿಗಳ ವಿರುದ್ಧ ಹಕ್ಕುಚ್ಯುತಿ ಆಗುತ್ತದೆ. ಇವೊತ್ತು ಅವರು ಮುಖ್ಯಮಂತ್ರಿಗಳು, ಆದರೆ ಅವೊತ್ತು

ಅವರು ಸಂಸದೀಯ ವ್ಯವಹಾರ ಮಂತ್ರಿಗಳಾಗಿ ಉತ್ತರ ಹೇಳಿದ್ದಾರೆ. ಅದನ್ನು ಸದನಕ್ಕೆ ಯಾರು ಉತ್ತರ ಹೇಳಿದ್ದಾರೋ he will be held responsible for that. ಆದಕ್ಕೆ ತಮಗೆ ಅವತ್ತು ನಾನು ಅಭಿನಂದನೆ ಸಲ್ಲಿಸಿದ್ದೇನೆ. ಇವರ ಬಗ್ಗೆ ಅದೇ ದಿವಸ ನಾನು ತಿದ್ದುಪಡಿಯನ್ನು ತಂದಿದ್ದೇನೆ. ಅದು ಕಾನೂನು ಮಂತ್ರಿಗಳಿಗೆ ಬರುವುದಿಲ್ಲ ಎಂದು ಪತ್ರಿಕೆಗಳಲ್ಲಿ ಬಂದಿರತಕ್ಕಂಥಾದ್ದು ನಿಜ ಇದೆ ಎಂದು ಈ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಸನ್ಮಾನ್ಯ ಅಧ್ಯಕ್ಷರೆ, ಮೊನ್ನೆ 13ನೇ ತಾರೀಖು ಸನ್ಮಾನ್ಯ ಚಂದ್ರೇಗೌಡರು ಮಾರ್ಕೆಟಿಂಗ್ ಫೆಡರೇಷನ್ ಮೇಲೆ ಮಾತನಾಡುವಾಗ, ಕೆಲವು ಮಾತುಗಳನ್ನು ಗೊಬ್ಬರದ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ನನಗೆ ಹೇಳುವುದಕ್ಕೆ ತಾವು ಅವಕಾಶ ಕೊಡಬೇಕು. ಏಕೆಂದರೆ ನಾನೇ ಅಧ್ಯಕ್ಷನಾಗಿದ್ದೇನೆ. ಆದ್ದರಿಂದ ನನಗೆ ಹೇಳುವುದಕ್ಕೆ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು:– ತಾವು ಬರೆದು ಕಳುಹಿಸಿಕೊಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಆಯಿತು.

ಅಧ್ಯಕ್ಷರು:– ಈಗ ಕಾರ್ಯಸೂಚಿ ಪ್ರಕಾರ ಹೋಗುವುದಕ್ಕೆ ಬದಲಾಗಿ ಮೊನ್ನೆ ನಡೆದಂಥ 68ನೇ ನಿಯಮಾವಳಿ ಚೌಕಟ್ಟಿನಲ್ಲಿ ಆಶ್ರಯದ ಬಗ್ಗೆ ಏನು ಚರ್ಚೆ ನಡೆಯುತ್ತಾ ಇತ್ತು, ಅದನ್ನು ಮುಂದುವರೆಸಿ ಮುಗಿಸಿಬಿಡೋಣ. ಆನಂತರ ಗಮನಸೆಳೆಯುವ ಸೂಚನೆ ಮತ್ತು ಇತರ ವಿಚಾರಗಳನ್ನು ತೆಗೆದುಕೊಳ್ಳೋಣ.

ನಿಯಮ 68ರ ಮೇರೆಗೆ ಚರ್ಚೆ

† ಡಾ|| ಜೀವರಾಜ್ ಆಳ್ವ:– ಸಭಾಧ್ಯಕ್ಷರೆ, ಮೊನ್ನೆ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳು ಇದ್ದರೂ ಕೂಡ ಬಹಳ ತೀಕ್ಷ್ಣ ಟೀಕೆಗಳಿಗೆ ಉತ್ತರವಾಗಿ ಹಿಂದಿನ ಮಂತ್ರಿಗಳಾದ ಶ್ರೀ ಜಾರ್ಜ್‌ರವರು ಸಚಿವ ಸಂಪುಟದ ಒಪ್ಪಿಗೆಯಾಗಿದೆ ಎಂದು ಹೇಳಿದರು. ಸಚಿವ ಸಂಪುಟದ ಒಪ್ಪಿಗೆಯಾಗಿದೆ ಅದನ್ನು ಒಪ್ಪೋಣ. ಆದರೆ ಈ ಸ್ಕೀಂ ಆಗುವುದಕ್ಕಿಂತ ಮುಂಚೆ ಯಾವುದೇ ಫೈನಾನ್ಸಿಯಲ್ ಟೈ ಆಪ್ ಆಗಲಿಲ್ಲ. ಬ್ಯಾಂಕ್ ಗ್ಯಾರಂಟಿ ಆಗಿಲ್ಲ. ಕ್ಯಾಬಿನೆಟ್‌ನಲ್ಲೂ ಬ್ಯಾಂಕ್ ಗ್ಯಾರಂಟಿಯೂ ಆಗಿಲ್ಲ. ಇನ್ಸಿಟಿಟ್ಯೂಷನಲ್ ಫೈನಾನ್ಸಿಂಗ್ ಮತ್ತು ಇನ್ನೊಂದು ಮಾತು ಹೇಳಿದರು. ಸೆಲ್ಫ್ ಫೈನಾನ್ಸಿಂಗ್ ಸ್ಕೀಂ ಆಗಿತ್ತು. ಒಂದು ವೇಳೆ ಸೆಲ್ಫ್ ಫೈನಾನ್ಸಿಂಗ್ ಸ್ಕೀಂ ಆಗಿತ್ತು ಎಂದು ಒಪ್ಪಿಕೊಂಡರೂ ಕೂಡ ಈ ಸೆಲ್ಫ್ ಫೈನಾನ್ಸ್ ಸ್ಕೀಂನ್ನು ಯಾವತ್ತು ನೀವು ಅನೌನ್ಸ್ ಮಾಡಿದಿರಿ. ಇದಕ್ಕೆ ಎಷ್ಟು ಅಪ್ಲಿಕೇಷನ್ಸ್ ಬಂದವು? ಎಷ್ಟು ದುಡ್ಡು ಕಲೆಕ್ಟ್ ಆಯಿತು ಎಂದು ಹೇಳಬೇಕು ತಾನೇ? ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡಬೇಕು. ದಯವಿಟ್ಟು ಆ ಉತ್ತರ ಕೊಡಬೇಕಾಗುತ್ತದೆ. ಈ ಆಶ್ರಯದ ಸ್ಕೀಂನಲ್ಲಿ ಸೆಲ್ಫ್ ಫೈನಾನ್ಸಿಂಗ್ ಸ್ಕೀಂನಲ್ಲಿ ಅಪ್ಲಿಕೇಷನ್ ಎಷ್ಟು ಬಂತು? ಹಣ ಎಷ್ಟು ಕಲೆಕ್ಟ್ ಮಾಡಿದಿರಿ? ಏನು ಮಾಡಿದಿರಿ? ಯಾವುದಾದರೂ ಇನ್ಸ್‌ಟಿಟ್ಯೂಷನಲ್ ಫೈನಾನ್ಸಿಯಲ್ ಟೈಆಪ್ ಮಾಡಿದಿರಾ? ಅದು ಇಲ್ಲ. ಯಾವುದಾದರೂ ಬ್ಯಾಂಕಿಂಗ್ ಇನ್ಸಿಟಿಟ್ಯೂಷನಲ್ ಹತ್ತಿರ ಏನಾದರೂ ಬ್ಯಾಂಕ್ ಗ್ಯಾರಂಟಿ ತೆಗೆದುಕೊಂಡಿದ್ದೀರಾ? ಅದೂ ಇಲ್ಲ. ಗವರ್ನಮೆಂಟ್ ಗ್ಯಾರಂಟಿ ಏನಾದರೂ ಕೊಟ್ಟಿದ್ದೀರಾ? ಅದೂ ಇಲ್ಲ. ಇದು ಟೋಟಲ್ ವ್ಯಾಕ್ಯುಂ. ಇವರು ಏನು ಕ್ರಿಯೇಟ್ ಮಾಡಲಿಕ್ಕೆ ಹೋಗಿದ್ದಾರೆಂದರೆ ಕರ್ನಾಟಕವೇ ಕಂಡರಿಯದಂತಹ ಒಂದು ದುಷ್ಟ ಕೂಟವನ್ನು ಏರ್ಪಾಟು ಮಾಡಿ, ಇದರ ಮೂಲಕ ಸರ್ಕಾರದ ಖಜಾನೆಯನ್ನು ಬರಿದು ಮಾಡಲಿಕ್ಕೆ, ಖಾಲಿ ಮಾಡಲಿಕ್ಕೆ ಹೊರಟಂಥ ಸಂಚು. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತಿದ್ದೇನೆ, ಯಾವ್ಯಾವ